ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	521 (580)
ಸದಸ್ಯರ ಹೆಸರು	:	ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	21.02.2022
ಉತ್ತರಿಸುವವರು	:	ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ನವ ಮಂಗಳೂರು ಬಂದರಿನ ನಿರ್ವಸಿತರಿಗೆ ಆಶ್ರಯ ಕಲ್ಪಿಸುವ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮವನ್ನು ಗುರುತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ವಸತಿ ಪ್ರದೇಶದ ಮರದ ಮಿಲ್ಲುಗಳನ್ನು ನಡೆಸಲು ನಿಯಮಾನುಸಾರ ಅನುಮತಿ ಇಲ್ಲವೆಂದಾದಲ್ಲಿ ಈ ನಿರ್ವಸಿತರಿಗಾಗಿ ಇರುವ ಗ್ರಾಮದಲ್ಲಿ ಮರದ ಮಿಲ್ಲುಗಳನ್ನು ಸ್ಥಾಪಿಸಲು ಯಾವ ನಿಯಮದ ಅನ್ವಯ ಅನುಮತಿಸಲಾಗಿದೆ;	ನವ ಮಂಗಳೂರು ಬಂದರಿನ ನಿರ್ವಸಿತರಿಗೆ ಆಶ್ರಯ ಕಲ್ಪಿಸುವ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮವನ್ನು ಗುರುತಿಸಿರುವ ಬಗ್ಗೆ ಮಂಗಳೂರು ಅರಣ್ಯ ವಿಭಾಗದಲ್ಲಿ ಯಾವುದೇ ದಾಖಲೆಗಳಿರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮದಲ್ಲಿ 4 ಮರದ ಮಿಲ್ಲುಗಳಿರುತ್ತವೆ. 1. ಮೆ||ಕಾಳಿಕಾಂಬ ಫರ್ನಿಚರ್ಸ್ ವರ್ಕ್ಸ್, ಕೃಷ್ಣಾಪುರ, ಕಾಟಿಪಳ್ಳ ಇದು1989-90ರಲ್ಲಿ ಸ್ಥಾಪನಗೊಂಡಿರುತ್ತದೆ. 2. ಮೆ||ಆಶಾವುಡ್ ವರ್ಕ್ಸ್, ಇಂಡಸ್ಟ್ರೀಸ್, ಕೃಷ್ಣಾಪುರ, ಕಾಟಿಪಳ್ಳ ಇದು 1985-86ರಲ್ಲಿ ಸ್ಥಾಪನಗೊಂಡಿರುತ್ತದೆ. 3. ಮೆ||ಕಾಳಿಕಾಂಬ ವುಡ್ ಇಂಡಸ್ಟ್ರೀಸ್ & ಫರ್ನಿಚರ್ಸ್, 5ನೇಬ್ಲಾಕ್, ಕೃಷ್ಣಾಪುರ, ಕಾಟಿಪಳ್ಳ ಇದು 2002-03ರಲ್ಲಿ ಸ್ಥಾಪನಗೊಂಡಿರುತ್ತದೆ. 4. ಮೆ|| ಎಸ್ಕಿ ಟಿಂಬರ್ಸ್ & ವುಡ್ ಇಂಡಸ್ಟ್ರೀಸ್, ಕಾಟಿಪಳ್ಳ ಇದು 2000-01ರಲ್ಲಿ ಸ್ಥಾಪನಗೊಂಡಿರುತ್ತದೆ. ಸದರಿ ಮಿಲ್ಲುಗಳು 20 ರಿಂದ 35 ವರ್ಷಗಳ ಹಿಂದೆ ಸ್ಥಾಪನೆಯಾದ ಮಿಲ್ಲುಗಳಾಗಿದ್ದು ಸದರಿ ಪ್ರದೇಶವು ಮಂಗಳೂರು ಮಹಾನಗರ ಪಾಲಿಕೆಯ ಉದ್ದಿಮೆ ಲೈಸೆನ್ಸ್ ಹಾಗೂ ಅರಣ್ಯ ಇಲಾಖೆಯ ಪರವಾನಿಗೆ ಪಡೆದು ಕಾರ್ಯ ನಿರ್ವಹಿಸುತ್ತಿರುತ್ತವೆ.
ಆ)	ಈ ವಸತಿ ಪ್ರದೇಶವು ಕಾಯ್ದಿರಿಸಿದ ಅರಣ್ಯ ಪ್ರದೇಶದಿಂದ ಅಥವಾ ಸಂರಕ್ಷಿತ ಅರಣ್ಯ ಪ್ರದೇಶದಿಂದ ಎಷ್ಟು ಕಿ.ಮೀ ದೂರದಲ್ಲಿದೆ; ಈ ಪ್ರದೇಶದ 10ಕಿ.ಮೀ ವ್ಯಾಪ್ತಿಯಲ್ಲಿರುವ ಕಾಯ್ದಿರಿಸಿದ ಅರಣ್ಯ ಪ್ರದೇಶ ಅಥವಾ ಸಂರಕ್ಷಿತ ಅರಣ್ಯ ಪ್ರದೇಶದ ಹೆಸರಿನೊಂದಿಗೆ ಮಾಹಿತಿ ನೀಡುವುದು;	ದಕ್ಷಿಣ ಕನ್ನಡ ಜಿಲ್ಲೆಯ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮವು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ವಸತಿ ಪ್ರದೇಶವು ಕಲ್ಲಮುಡ್ಕೂರು ಮೀಸಲು ಅರಣ್ಯ ದಿಂದ 13.38 ಕಿ.ಮೀ ದೂರದಲ್ಲಿರುತ್ತದೆ.

ಇ)	ಕೃಷ್ಣಾಪುರ 5ನೇ ಬ್ಲಾಕಿನಲ್ಲಿರುವ ಆಶಾ ಮರದ ಮಿಲ್ಲು ರಸ್ತೆಯ ಇಕ್ಕೆಲಗಳಲ್ಲಿ ಮರದ ದಿಮ್ಮಿಗಳನ್ನು ರಾಶಿ ರಾಶಿ ಹಾಕುವ ಮೂಲಕ ಸಾರ್ವಜನಿಕರಿಗೆ ಮತ್ತು ವಾಹನ ಚಾಲಕರಿಗೆ ತೊಂದರೆಯುಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;	ಕೃಷ್ಣಾಪುರ 5ನೇ ಬ್ಲಾಕಿನಲ್ಲಿರುವ ಆಶಾ ಮರದ ಮಿಲ್ಲು ರಸ್ತೆಯ ಇಕ್ಕೆಲಗಳಲ್ಲಿ ಮರದ ದಿಮ್ಮಿಗಳನ್ನು ರಾಶಿ ರಾಶಿ ಹಾಕುವ ಬಗ್ಗೆ ಸಾರ್ವಜನಿಕರಿಂದ ಮತ್ತು ವಾಹನ ಚಾಲಕರಿಂದ ಯಾವುದೇ ದೂರರ್ಜಿಗಳು ವಿಭಾಗ ಕಛೇರಿಯಲ್ಲಿ ಸ್ವೀಕೃತಿಯಾಗಿರುವುದಿಲ್ಲ. ಸಾಮಿಲ್ ಮಾಲೀಕರು ಎಫ್‌ಎಸಿ ನಮೂನೆ 43 ಮತ್ತು 44ರಲ್ಲಿ ಸಲ್ಲಿಸುವ ನಾಟಾ ವಿವರಗಳ ಆಧಾರದ ಮೇಲೆ ಸಂಬಂಧಪಟ್ಟ ಶಾಖಾ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು ತಿಂಗಳಿಗೊಮ್ಮೆ ಸಾಮಿಲ್ಲನ್ನು ಪರಿಶೀಲನೆ ಮಾಡುತ್ತಾರೆ ಹಾಗೂ ಸಾಮಿಲ್ ಲೈಸೆನ್ಸ್ ನವೀಕರಣದ ಸಮಯದಲ್ಲಿ ವಲಯ ಅರಣ್ಯಾಧಿಕಾರಿಯವರು ಸಂಬಂಧಪಟ್ಟ ಶಾಖಾ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರೊಂದಿಗೆ ಸಾಮಿಲ್ಲನ್ನು ಪರಿಶೀಲನೆ ಮಾಡುತ್ತಾರೆ.
ಈ)	ಕಳೆದ ಮೂರು ವರ್ಷಗಳಲ್ಲಿ ಈ ಮರದ ಮಿಲ್ಲಿಗೆ ತಪಾಸಣೆಗಾಗಿ ಹೋದ ಅಧಿಕಾರಿ ಸಿಬ್ಬಂದಿಗಳು ಯಾರು ಎಷ್ಟು ಬಾರಿ ಈ ಮರದ ಮಿಲ್ಲಿನ ತಪಾಸಣೆ ನಡೆಸಲಾಗಿದೆ ಅರಣ್ಯ ಅಧಿಕಾರಿಗಳು ಪ್ರತಿ ಬಾರಿಯ ತಪಾಸಣೆ ಸಮಯದಲ್ಲಿ ಎಷ್ಟು ಮೊತ್ತವನ್ನು ಲಂಚವನ್ನಾಗಿ ತೆಗೆದುಕೊಳ್ಳುತ್ತಾರೆ? (ವಿವರ ನೀಡುವುದು)	ಸಾಮಿಲ್ ಮಾಲೀಕರು ಎಫ್‌ಎಸಿ ನಮೂನೆ 43 ಮತ್ತು 44ರಲ್ಲಿ ಸಲ್ಲಿಸುವ ನಾಟಾ ವಿವರಗಳ ಆಧಾರದ ಮೇಲೆ ಸಂಬಂಧಪಟ್ಟ ಶಾಖಾ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು ತಿಂಗಳಿಗೊಮ್ಮೆ ಸಾಮಿಲ್ಲನ್ನು ಪರಿಶೀಲನೆ ಮಾಡುತ್ತಾರೆ ಹಾಗೂ ಸಾಮಿಲ್ ಲೈಸೆನ್ಸ್ ನವೀಕರಣದ ಸಮಯದಲ್ಲಿ ವಲಯ ಅರಣ್ಯಾಧಿಕಾರಿಯವರು ಸಂಬಂಧಪಟ್ಟ ಶಾಖಾ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರೊಂದಿಗೆ ಸಾಮಿಲ್ಲನ್ನು ಪರಿಶೀಲನೆ ಮಾಡುತ್ತಾರೆ. ಅರಣ್ಯ ಅಧಿಕಾರಿಗಳು ಮರದ ಮಿಲ್ಲಿನ ತಪಾಸಣೆ ನಡೆಸುವ ಸಮಯದಲ್ಲಿ ಲಂಚವನ್ನು ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಯಾವುದೇ ದೂರುಗಳು ಸಾರ್ವಜನಿಕರಿಂದ ಸ್ವೀಕೃತಿಯಾಗಿರುವುದಿಲ್ಲ.

ಸಂಖ್ಯೆ: ಅಪಜೀ 05 ಎಫ್‌ಡಿಪಿ 2022

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು